‘ಕೊಳಕು ಮಂಡಲ!’ ಅವನೆಂದ.

‘ಕೊಳಕು ಮಂಡಲ? ಅಯ್ಯೋ ದೇವರೇ! ಎಲ್ಲಿ ಕಚ್ಚಿತು ಹ್ಯಾರಿ? ಎಷ್ಟೊತ್ತಾಯ್ತು?’ ನಾನು ಹೌಹಾರಿದೆ.

‘ಶಟಪ್’ ಅವನು ಮತ್ತೊಮ್ಮೆ ಕಿರುಚಿದ.

‘ಇಲ್ಲಿ ಕೇಳು ಹ್ಯಾರಿ...’ ನಾನು ಅವನ ಕಿವಿಯವರೆಗೆ ಬಗ್ಗಿ ಉಸುರಿದೆ. ‘ಇದು ತುಂಬಾ ವಿಷಕಾರಿ ಹಾವು. ವೇಳೆ ಹಾಳುಮಾಡುವಂತಿಲ್ಲ. ಬೇಗ ಹೇಳು.’ ನಾನು ಅವಸರಿಸಿದೆ.

ಅವನು ಕಿಂಚಿತ್ತೂ ಮಿಸುಕಾಡದೆ, ಸರಾಗವಾಗಿ ಉಸಿರಾಡಲೂ ಕಷ್ಟಪಡುತ್ತಾ ನೋವು ನುಂಗಿಕೊಂಡು ನಿಶ್ಚಲನಾಗಿ ಬಿದ್ದುಕೊಂಡಿದ್ದ.

‘ಹಾವು ನನಗೆ ಕಚ್ಚಿಲ್ಲ. ಅಂದರೆ... ಇನ್ನೂ ಕಚ್ಚಿಲ್ಲ. ಅದು ಆರಾಮವಾಗಿ ನನ್ನ ಹೊಟ್ಟೆಯ ಮೇಲೆ ಮಲಗಿದೆ!...’ ಎಂದ ಪುಸಪುಸ ದನಿಯಲ್ಲಿ.

ನಾನು ಅಪ್ರಜ್ಞಾಪೂರ್ವಕವಾಗಿ ಮಂಚದಿಂದ ಹಿಂದೆ ಸರಿದು ಅವನ ಹೊಟ್ಟೆಯ ಭಾಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದೆ. ಏನೂ ಗೊತ್ತಾಗುತ್ತಿರಲಿಲ್ಲ. ಮೇಲೆ ಹೊದಿಕೆ ಇತ್ತು. ಅದು ಹಲವು ಕಡೆ ಮಡಿಕೆಯಾಗಿತ್ತು. ಕೊಳಕು ಮಂಡಲ ಎಲ್ಲಿ ಮಲಗಿತ್ತೆಂದು ಊಹಿಸಲೂ ಸಾಧ್ಯವಿರಲಿಲ್ಲ.

‘ಅದು... ಅದು ಖಂಡಿತವಾಗಿಯೂ ನಿನ್ನ ಹೊಟ್ಟೆಯ ಮೇಲೆ ಮಲಗಿದೆ ಎನ್ನುತ್ತೀಯಾ ಹ್ಯಾರಿ?’ ನಾನು ಕೇಳಿದೆ.

‘ದೇವರಾಣೆಗೂ... ಟಿಂಬರ್!’

‘ಅದು ಅಲ್ಲಿಗ್ಹೇಗೆ ಹೋಯ್ತು ಹ್ಯಾರಿ?’ ನನಗಿನ್ನೂ ನಂಬಿಕೆ ಬಂದಿರಲಿಲ್ಲ.

ಅವನಿಗೆ ಧೈರ್ಯ ತುಂಬಿಸುವುದನ್ನು ಬಿಟ್ಟು ನಾನು ಈ ಪ್ರಶ್ನೆಯನ್ನು ಕೇಳಲೇ ಬಾರದಿತ್ತು. ಪಾಪ, ಅವನೇಕೆ ಸುಳ್ಳು ಹೇಳುತ್ತಾನೆ?

‘ನಾನು ಮಲಗಿಕೊಂಡು ಓದುತ್ತಿದ್ದೆ...’ ಹೊಟ್ಟೆಯನ್ನು ಕಿಂಚಿತ್ತೂ ಅಲುಗಾಡಿಸದೆ ಹ್ಯಾರಿ ಉದ್ಗರಿಸಿದ. ‘ಎದೆಯ ಮೇಲೆ, ಪುಸ್ತಕದ ಹಿಂಭಾಗದಲ್ಲಿ ಎಂತಾದ್ದೊ ಮೆತ್ತನೆದು, ಥಂಡಿ ಥಂಡಿ ಕಚುಗುಳಿ ಇಟ್ಟಂತೆ ಸರಿದಾಡಿದಂತಾಯಿತು. ನಾನು ಕಣ್ಣಂಚಿನಲ್ಲೇ ಅತ್ತ ದೃಷ್ಟಿ ಹಾಯಿಸಿದೆ. ನನ್ನ ಎದೆಯ ಮೇಲೆ ಒಂದು ಕೊಳಕು ಮಂಡಲ ಸರಿದಾಡುತ್ತಿತ್ತು. ಮರಿ ಕೊಳಕು ಮಂಡಲ. ಸುಮಾರು ಹತ್ತು ಹನ್ನೆರಡು ಇಂಚು ಉದ್ದ ಇದ್ದಿರಬಹುದು. ನಾನು ನಿಶ್ಚಲನಾಗಿ ಮಂತ್ರಮುಗ್ಧನಾಗಿ ಅದನ್ನೇ ನೋಡತೊಡಗಿದೆ. ಅದು ಹಾಗೆಯೇ ನನ್ನ ಹೊದಿಕೆಯ ಮೇಲಿಂದ ಹೊರಟುಹೋಗಿಬಿಡುತ್ತದೆ ಎಂದುಕೊಂಡೆ...’ ಅವನು ಕೆಲವು ಗಳಿಗೆ ಮೌನವಾದ. ತಾನು ಮಾತನಾಡಿ ಎಲ್ಲಿ ಹಾವನ್ನು ಎಬ್ಬಿಸಿದೆನೋ ಎಂಬಂತೆ ಅವನು ಹೊಟ್ಟೆಯ ಕಡೆಗೇ ನೋಡತೊಡಗಿದ.

ಅವನು ನೋಡುತ್ತಿದ್ದ ಜಾಗದಲ್ಲಿ ಹೊದಿಕೆಯ ಮೇಲೆ ದೊಡ್ಡದಾದ ನಿರಿಗೆ ಬಿದ್ದಿತ್ತು. ‘ಆ ಮರಿ ಕೊಳಕು ಮಂಡಲ ಅದರೊಳಗೆ ಹೋಯಿತು...’ ಅವನು ಎಷ್ಟು ಮೆಲ್ಲಗೆ ಹೇಳಿದನೆಂದರೆ ನಾನು ಕಿವಿಯನ್ನು ಅವನ ಬಾಯಿಯವರೆಗೂ ಬಗ್ಗಿಸಿದೆ. ‘ಅದು ಇನ್ನೂ ಅಲ್ಲೇ ಇದೆ. ಈಗಲೂ ನನ್ನ ಹೊಟ್ಟೆಯ ಮೇಲೆ ಹರಿದಾಡಿದಂತೆ ಭಾಸವಾಗುತ್ತಿದೆ. ಈಗ ಬಹುಶಃ ನನ್ನ ಹೊಟ್ಟೆಯ ಬಿಸಿಗೆ ಅಲ್ಲೇ ನಿದ್ದೆ ಹೋಗಿರಬೇಕು. ನೀನು ಯಾವಾಗ ಬರುತ್ತೀಯೋ ಎಂದು ಕಾತರದಿಂದ ಕಾಯುತ್ತಿದ್ದೆ...’ ಅವನು ಮುಖವನ್ನೆತ್ತಿ ನನ್ನನ್ನೇ ದಿಟ್ಟಿಸಿದ.

‘ಇದೆಲ್ಲಾ ಘಟಿಸಿ ಎಷ್ಟೊತ್ತಾಯಿತು?’